ಆ) ಬಂದಿದ್ದಲ್ಲಿ ಈ ಅಕ್ರಮ ಖಾತೆಯನ್ನು ರದ್ದುಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು (ವಿವರ ನೀಡುವುದು)?

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.111ರಲ್ಲಿ ಒಟ್ಟು 76 ಎಕರೆ ಸರ್ಕಾರಿ ಜಮೀನಿದ್ದು ಈ ಪೈಕಿ 20 ಎಕರೆಯಲ್ಲಿ ಶ್ರೀ ಸಿ.ಆರ್.ಗೋವಿಂದರೆಡ್ಡಿ ಬಿನ್ ರಾಮ್ಮಯ್ಯ ಎಂಬುವವರಿಗೆ 15 ಎಕರೆ ಹಾಗೂ ಶ್ರೀ ಎನ್.ಗೋವಿಂದ ರಾಜು ಬಿನ್ ನಾರಾಯಣಪ್ಪ ಇವರ ಹೆಸರಿಗೆ 5 ಎಕರೆ ಪ್ರದೇಶವನ್ನು ಅಕ್ರಮವಾಗಿ ಕಂದಾಯ ದಾಖಲೆಗಳಲ್ಲಿ ನಮೂದು ತಂದಿದ್ದು, ಸದರಿ ಅಕ್ರಮ ದಾಖಲೆಗಳನ್ನು ರದ್ದು ಪಡಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136(3)ರ ಅಡಿಯಲ್ಲಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ವಿಚಾರಣೆ ನಡೆಯುತ್ತಿದೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (164)199
2. ಸದಸ್ಯರ ಹೆಸರು : ಶ್ರೀ ಎಸ್.ಆರ್.ವಿಶ್ವನಾಥ್
3. ಉತ್ತರಿಸುವವರು : (ಶ್ರೀ ಬಸವರಾಜ್ ಬೊಮ್ಮಾಯಿ)

ಅ ಅರ್ಕಾವತಿ ನದಿಯು ನಂದಿ ಬೆಟ್ಟದಲ್ಲಿ ಹುಟ್ಟಿ, ಮಂಚನಬೆಲೆ ಕಿರು ಅಣೆಕಟ್ಟೆವರೆಗೂ ಹರಿದು ಹೋಗುತ್ತಿದ್ದು, ಇತ್ತೀಚೆಗೆ ಈ ನದಿಯು ಸರಿಯಾದ ನದಿ ಕಾಲುವೆಗಳು ಇಲ್ಲದೆ ಬತ್ತಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅರ್ಕಾವತಿ ನದಿಯು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಉಳಿದ ಅವಧಿಯಲ್ಲಿ ನದಿ ಬತ್ತುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ ಹಾಗಿದ್ದಲ್ಲಿ, ಇದನ್ನು ಪುನಃಶ್ಚೇತನಗೊಳಿಸುವ ಉದ್ದೇಶವೇನಾದರೂ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು ?

ಈಗ ಸದ್ಯಕ್ಕೆ ಯಾವುದೇ ನದಿಯ ಪುನಶ್ಚೇತನಗೊಳಿಸುವ ಕಾರ್ಯ ಸರ್ಕಾರದ ಮುಂದೆ ಇರುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (165)200
2. ಸದಸ್ಯರ ಹೆಸರು : ಶ್ರೀ ವಿಶ್ವನಾಥ್ ಎಸ್.ಆರ್ (ಯಲಹಂಕ)
3. ವಿಷಯ : ಬೆಂಗಳೂರು ಉತ್ತರ ತಾಲ್ಲೂಕನ್ನು ವಿಸ್ತರಿಸಿಕೊಂಡು ಒಂದು ಮಾಡುವುದು
4. ಉತ್ತರಿಸುವ ಸಚಿವರು :(ಶ್ರೀ.ಜಿ.ಕರುಣಾಕರ ರೆಡ್ಡಿ) ಕಂದಾಯ ಸಚಿವರು

(ಅ) ಯಲಹಂಕ ವಿಧಾನ ಸಭಾ ಕ್ಷೇತ್ರವು ಸುಮಾರು 40 ಕಿ.ಮೀಗಳಿಗಿಂತಲೂ ಉದ್ದವಾಗಿದ್ದು 5 ಹೋಬಳಿಗಳನ್ನೊಳಗೊಂಡ ವಿಧಾನ ಸಭಾ ಕ್ಷೇತ್ರವಾಗಿದೆ. ಇದನ್ನು ಒಂದೇ ತಾಲ್ಲೂಕನ್ನಾಗಿ ಮಾಡುವ ವಿಚಾರ ಸರ್ಕಾರದ ಗಮನದಲ್ಲಿ ಇದೆಯೇ?

ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ. ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಲಾಗಿದ್ದು, ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

(ಆ) ಹಾಗಿದ್ದಲ್ಲಿ, ಇದನ್ನು ಒಂದೇ ತಾಲ್ಲೂಕನ್ನಾಗಿ ಘೋಷಣೆ ಮಾಡುವುದು ಯಾವಾಗ; ಹಾಗಿಲ್ಲದಿದ್ದಲ್ಲಿ ಇದಕ್ಕಿರುವ ಅಡಚಣೆಗಳೇನು? ಮಾಹಿತಿ ಒದಗಿಸುವುದು.

– ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ –

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (166)201
ಸದಸ್ಯರ ಹೆಸರು : ಶ್ರೀ ವಿಶ್ವನಾಥ್ ಎಸ್.ಆರ್.
ಉತ್ತರಿಸುವವರು : (ಶ್ರೀ.ಜಿ. ಕರುಣಾಕರ ರೆಡ್ಡಿ) ಮಾನ್ಯ ಕಂದಾಯ ಸಚಿವರು.

ಅ) ಸರ್ಕಾರಿ ಜಾಗಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ಕಡುಬಡವರಿಗೆ ಅದೇ ಮನೆಗಳನ್ನು ಸಕ್ರಮಗೊಳಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಸಿ ರಡಿಯಲ್ಲಿ ದಿ:14.04.1998ಕ್ಕೆ ಪೂರ್ವದಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮನೆಯನ್ನು ನಿರ್ಮಿಸಿದ್ದು ದಿ:01.01.2002ಕ್ಕೆ ಮುಂಚಿತವಾಗಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಮಾತ್ರ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆ) ಈ ಹಿಂದೆ 94ಸಿ ನಲ್ಲಿ ಅಕ್ರಮ ಕಟ್ಟಡ ಸಕ್ರಮಗೊಳಿಸಲು ಅರ್ಜಿ ಹಾಕದೇ ಇರುವ ಕೆಲವು ಅನಕ್ಷರಸ್ಥ ಬಡವರು ತೊಂದರೆ ಅನುಭವಿಸುತ್ತಿದ್ದು, ಇವರಿಗೆ ಮತ್ತೊಮ್ಮೆ ಅರ್ಜಿ ಹಾಕಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗುವುದೇ;

ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಇ) ಹಾಗಿದ್ದಲ್ಲಿ, ಅದರ ಪೂರ್ಣ ಮಾಹಿತಿಯನ್ನು ಒದಗಿಸುವುದು?

ಉದ್ಭವಿಸುವುದಿಲ್ಲ.

ಸದಸ್ಯರ ಹೆಸರು : ಶ್ರೀ ಡಾ:ಸುಧಾಕರ್ ಎಂ.ಸಿ. (ಚಿಂತಾಮಣಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (305)171
ಉತ್ತರಿಸುವ ಸಚಿವರು : (ಶ್ರೀ ಗೊಳಿಹಟ್ಟಿ.ಡಿ.ಶೇಖರ್)